**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2016–17** **ದಿನಾಂಕ: 07–02–2017**

# ಪತ್ರಿಕಾ ಪ್ರಕಟಣೆ

## ಫೆ. 14 ರವರೆಗೆ ವಿಧಾನಸಭಾ ಅಧಿವೇಶನ

**ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)**

ಪ್ರಸ್ತುತ ನಡೆಯುತ್ತಿರುವ ಹದಿನಾಲ್ಕನೇ ವಿಧಾನಸಭೆಯ ಹದಿಮೂರನೇ ಅಧಿವೇಶನವನ್ನು ಫೆಬ್ರವರಿ 14, 2017ರವರೆಗೆ ವಿಸ್ತರಿಸಲಾಗಿದೆ.

ಫೆ 10 ರವರೆಗೆ ನಿಗದಿಯಾಗಿದ್ದ ವಿಧಾನಸಭೆಯ ಅಧಿವೇಶನವನ್ನು ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಫೆ.14,2107ರವರೆಗೆ ವಿಸ್ತರಿಸಲಾಗಿದ್ದು, ಫೆ.13ರಂದು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯಲಿದ್ದು, ಫೆ.14ರಂದು ಮುಖ್ಯಮಂತ್ರಿಗಳು ಚರ್ಚೆಗೆ ಉತ್ತರಿಸುವರು ಎಂದು ಪ್ರಕಟಣೆ ತಿಳಿಸಿದೆ.

ಅಧಿವೇಶನದ ಅವಧಿಯಲ್ಲಿ ಸ್ವೀಕೃತವಾಗುವ ವಿಧೇಯಕಗಳನ್ನು ಮಂಡನೆ ಮತ್ತು ಪರ್ಯಾಯಲೋಚನೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಎಸ್‌ಎಂ/ಮಮತ

## ಬರ ಪರಿಹಾರದ ಬಗ್ಗೆ ಚರ್ಚೆ – ಕಂದಾಯ ಸಚಿವರ ಉತ್ತರ

ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)

ಕೇಂದ್ರ ಸರ್ಕಾರದಿಂದ ಒಟ್ಟು 824.48 ಕೋಟಿ ಅನುದಾನ ಹಾಗೂ ರಾಜ್ಯದಿಂದ 1144.38 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರು ವಿಧಾನಸಭೆಗೆ ತಿಳಿಸಿದರು.

ರಾಜ್ಯದಲ್ಲಿ ಬರಪರಿಹಾರ, ಕುಡಿಯುವ ನೀರು, ಮೇವು, ಮುಂಗಾರು ಮತ್ತು ಹಿಂಗಾರು ಬೆಳೆ ಹಾನಿ ಇನ್ ಪುಟ್ ಸಬ್ಸಿಡಿ, ಪ್ರವಾಹ ಪರಿಹಾರ ಜಾನುವಾರುಗಳಿಗೆ ಜೀವ ರಕ್ಷಕ ಔಷಧಿ, ಪೌಷ್ಟಿಕ ಆಹಾರ ಖರೀದಿ

ಕೆರೆಗಳ ಹೂಳೆತ್ತುವ ಕೆಲಸ ಸೇರಿ ಒಟ್ಟು 1144.38 ಲಕ್ಷ ಕೋಟಿ ಅನುದಾನ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು..

ರಾಜ್ಯಾದ್ಯಂತ ತಲೆದೋರಿರುವ ತೀವ್ರ ಬರಗಾಲ ಪರಿಸ್ಥಿತಿಗೆ ಸಂಬಂಧಿಸಿದಂತೆ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಕೆ.ಜಿ. ಬೋಪಯ್ಯ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಎಂ. ಕಾರಜೋಳ, ಶ್ರೀ ಸಿ.ಟಿ. ರವಿ, ಶ್ರೀ ಅರವಿಂದ ಲಿಂಬಾವಳಿ, ಶ್ರೀ ವೈ. ಎ. ನಾರಾಯಣಸ್ವಾಮಿ, ಶ್ರೀ ಎಸ್. ಸುರೇಶ್ ಕುಮಾರ್, ಮುಂತಾದವರು ನಿಯಮ 60 ರಡಿ ಮಂಡಿಸಿದ ನಿಲುವಳೀ ಸೂಚನೆಗೆ ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪ ಅವರು ಉತ್ತರ ನೀಡುತ್ತಿದ್ದರು.

2016 ರಲ್ಲಿ ಮುಂಗಾರು ಬರ ಪರಿಸ್ಥಿತಿ ಅಂದಾಜು 17193.33 ಕೋಟಿ ರೂ. ನಷ್ಟವಾಗಿದ್ದು, ಎನ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ಕೇಂದ್ರಕ್ಕೆ 4702.54 ಕೋಟಿ ರೂ. ಪರಿಹಾರಕ್ಕೆ ಮನವಿ ಸಲ್ಲಿಸಿದ್ದು, 1782.44 ಕೋಟಿ ರೂ. ಮಂಜೂರಾಗಿದೆ. ಅನುದಾನ ಬಿಡುಗಡೆಯಾಗಬೇಕಿದೆ ಎಂದು ತಿಳಿಸಿದರು.

ಪ್ರವಾಹ ಪರಿಸ್ಥಿತಿಗಾಗಿ ಬೀದರ್, ಕಲಬುರಗಿ, ಬೆಳಗಾವಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ 2016ನೇ ಸೆಪ್ಟೆಂಬರ್‌ನಲ್ಲಿ ಉಂಟಾದ ಪ್ರವಾಹ ನಷ್ಟ 2485.06 ಕೋಟಿ ಎಂದು ಅಂದಾಜಿಸಿದ್ದು, ಎನ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ 386.44 ಕೋಟಿ ರೂ. ಅನುದಾನ ಕೋರಿದ್ದು, ಬಿಡುಗಡೆಯಾಗಬೇಕಿದೆ. ಹಿಂಗಾರಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ನಷ್ಟ 7097.89 ಕೋಟಿ ರೂ. ಎಂದು ಅಂದಾಜಿಸಿದ್ದು, ಕೇಂದ್ರಕ್ಕೆ 3310.83 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾಗಬೇಕಿದೆ ಎಂದು ಅವರು ತಿಳಿಸಿದರು.

2016-17 ರಲ್ಲಿ ಎಸ್.ಡಿ.ಆರ್.ಎಫ್. ಹಣಕಾಸು ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಕೇಂದ್ರದ ಪಾಲು 217.50 ಕೋಟಿ ರೂ. ರಾಜ್ಯದ ಪಾಲು ರೂ. 72.50 ಕೋಟಿ, ಒಟ್ಟು 290.00 ಕೋಟಿ ರೂ. ರಾಜ್ಯ ಸರ್ಕಾರವು ಆಯವ್ಯಯದಲ್ಲಿ ನಿಗಧಿಪಡಿಸಿರುವ ಹೆಚ್ಚುವರಿ ಅನುದಾನ 200.00 ಕೋಟಿ ಒಟ್ಟು. ಮೊತ್ತು 490.00 ಕೋಟಿ ರೂ. ಎಂದು ವಿವರಿಸಿದರು.

## ಮಳೆ-ಬೆಳೆ

ರಾಜ್ಯದಲ್ಲಿ 6 ವರ್ಷಗಳಿಂದ ಸತತವಾಗಿ ಬರಗಾಲ ಇದ್ದು, ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡು ಪ್ರದೇಶಗಳಲ್ಲಿ ವಾಡಿಕೆಗಿಂದ ಶೇ. 70 ರಷ್ಟು ಮಳೆ ಕಡಿಮೆಯಾಗಿದೆ. ಮುಂಗಾರಿನಲ್ಲಿ 839 ಮಿ.ಮಿ. ಗೆ 688 ಮಿ.ಮಿ. ನಷ್ಟು ಮಳೆಯಾಗಿದ್ದು, ಶೇ. 18 ರಷ್ಟು ಮಳೆ ಕಡಿಮೆಯಾಗಿದೆ. ಹಿಂಗಾರಿನಲ್ಲಿ 188 ಮಿ.ಮಿ. ಮಳೆಯಾಗಬೇಕಿದ್ದು, 54 ಮಿ.ಮಿ. ಆಗಿದೆ. ಶೇ. 71 ರಷ್ಟು ಕಡಿಮೆಯಾಗಿದೆ. ಉತ್ತರ ಕರ್ನಾಟದಲ್ಲಿ 145 ಮಿ.ಮಿ. ಗೆ 27 ಮಿ.ಮಿ. ನಷ್ಟು ಮಳೆಯಾಗಿದ್ದು, ಶೇ. 81 ರಷ್ಟು ಕಡಿಮೆಯಾಗಿದೆ.

ಕೃಷಿ ಬೆಳೆ ಬಗ್ಗೆ ಮಾತನಾಡಿ, 71.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಹಮ್ಮಿಕೊಂಡಿದ್ದು, 35.18 ಲಕ್ಷ ಹೆಕ್ಟೇರ್‌ನಲ್ಲಿನ ಬಿತ್ತನೆ ಬೆಳೆ ನಾಶವಾಗಿದೆ. ಹಿಂಗಾರಿನಲ್ಲಿ 25.98 ಲಕ್ಷ ಹೆಕ್ಟೇರ್ ಬಿತ್ತನೆ ಕೈಗೊಂಡಿದ್ದು, ಮಳೆ ಅಭಾವದಿಂದ ಉತ್ತರ ಕರ್ನಾಟಕದಲ್ಲಿ 15.00 ಲಕ್ಷ ಹೆ. ವಿಸ್ತೀರ್ಣದಲ್ಲಿ ಬಿತ್ತನೆಬೆಳೆ ನಾಶವಾಗಿದೆ.

ಮುಂಗಾರಿನಲ್ಲಿ 4.49 ಲಕ್ಷ ಕ್ವಿಂಟಾಲ್, ಹಿಂಗಾರಿನಲ್ಲಿ 1.87 ಲಕ್ಷ್ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯ್ತಿ ದರದಲ್ಲಿ ಸಕಾಲದಲ್ಲಿ ರೈತ ಸಂಪರ್ಕ ಸಂಸ್ಥೆಗಳ ಮೂಲಕ ವಿತರಣೆ ಮಾಡಲಾಗಿದೆ.

2016-17 ನೇ ಸಾಲಿನಲ್ಲಿ 23 ಲಕ್ಷ ಟನ್ ರಸಗೊಬ್ಬರದ ಬೇಡಿಕೆಗೆ 20.43 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರಗಳ ಸರಬರಾಜಾಗಿದೆ. ಹಿಂಗಾರಿನಲ್ಲಿ 15.00 ಲಕ್ಷ ಮೆಟ್ರಿಕ್ ಟನ್ ಬೇಡಿಕೆ ಇದ್ದು, 5.04 ಮೆಟ್ರಿಕ್ ಟನ್ ಸರಬರಾಜಾಗಿದೆ. ಕಾಪು ದಾಸ್ತಾನು ಸೇರಿದಂತೆ ಒಟ್ಟು 6.47 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿರುತ್ತದೆ. ಸಮರ್ಪಕ ಸರಬರಾಜಿಗೆ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಚನೆ ನೀಡಲಾಗಿದೆ.

ಮೇವು ಪರಿಸ್ಥಿತಿ:

2015 ರಲ್ಲಿ ಮೇವಿನ ಪರಿಸ್ಥತಿಯಲ್ಲಿ 42 ಗೋಶಾಲೆಗಳಲ್ಲಿ 57764 ಜಾನುವಾರುಗಳನ್ನು ಸಂರಕ್ಷಿಸಲಾಗಿದೆ. 14 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿದೆ. ಮೇವು ಬೆಳೆಯಲು ಉಚಿತವಾಗಿ ಮೇವುಬೀಜ ವಿತರಣೆಗೆ 25.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಒಟ್ಟು 34 ರಷ್ಟು ನೀರು ಲಭ್ಯವಿದೆ. ಕಾವೇರಿ ಜಲಾನಯನದಲಲಿ ಶೇ. 15 ರಷ್ಟು ನೀರು ಮಾತ್ರ ಲಭ್ಯವಿದೆ. ರಾಜ್ಯದಲ್ಲಿ 3598 ನೀರಾವರಿ ಕೆರೆಗಳಿದ್ದು, 5 ಕೆರೆಗಳು ಪೂರ್ತಿ ತುಂಬಿವೆ. 243 ಕೆರೆಗಳು ಶೇ. 50-90 ರಷ್ಟು, 348 ಕೆರೆಗಳು ಶೇ. 30-50 ರಷ್ಟು, 1109 ಕೆರೆಗಳು ಶೇ. 30 ರಷ್ಟು ತುಂಬಿದ್ದು 1895 ಕೆರೆಗಳು ಒಣಗಿವೆ. ಉತ್ತರ ಕರ್ನಾಟದಲ್ಲಿ 1627 ಕೆರೆಗಳಿದ್ದು, 598 ಕೆರೆಗಳಿಗೆ ನೀರು ಬಂದಿಲ್ಲ. 597 ಕೆರೆಗಳು ಶೇ. 30 ರಷ್ಟು ತುಂಬಿವೆ. 429 ಕೆರೆಗಳು ಶೇ. 50-90 ರಷ್ಟು 3 ಕೆರೆಗಳು ಪೂರ್ತಿ ತುಂಬಿವೆ.

ಬರಪರಿಸ್ಥಿತಿ ನಿಭಾಯಿಸಲು ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದ ಸಚಿವರು ರಾಜ್ಯದ ನಾಲ್ಕು ಕಂದಾಯ ವಿಭಾಗವಾರು ಸಚಿವರ ಅಧ್ಯಕ್ಷತೆಯಲ್ಲಿ ನಾಲ್ಕು ತಂಡಗಳ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು ಈ ತಂಡಗಳು ಡಿಸೆಂಬರ್ ತಿಂಗಳಲ್ಲಿ  ಜಿಲ್ಲೆಗಳಿಗೆ ಭೇಟಿ ನೀಡಿ ಬರಪರಿಸ್ಥಿತಿಯನ್ನು ಪರಿಶೀಲಿಸಿ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತಕ್ಕೆ ಪರಿಸ್ಥಿತಿ ನಿಭಾಯಿಸಲು ಸಲಹೆ ಸೂಚನೆಗಳನ್ನು ನೀಡಿದ್ದಾರೆ.  ಪ್ರಸಕ್ತ ಸಾಲಿನಲ್ಲಿ ತೀವ್ರ ಬರಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾನದಂಡಗಳನ್ನು 139 ತಾಲ್ಲೂಕುಗಳು ಹಾಗೂ ಹಿಂಗಾರು ಋತುವಿನಲ್ಲಿ 160 ತಾಲ್ಲೂಕುಗಳನ್ನು ಬರ-ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಕಂದಾಯ ಇಲಾಖೆಯ ಎಸ್‌ಡಿಆರ್‌ಎಫ್ ನಿಧಿಯಿಂದ ಏಪ್ರಿಲ್ 2016 ರಿಂದ ಈವರೆಗೆ ತುರ್ತು ಕುಡಿಯುವ ನೀರು ಹಾಗೂ ಗೋಶಾಲೆ ನಿರ್ವಹಣೆಗೆ 366.9 ಕೋಟಿ ಜಾನುವಾರುಗಳಿಗೆ ಔಷಧಿ ಹಾಗೂ ಖನಿಜ ಮಿಶ್ರಣಕ್ಕಾಗಿ 15 ಕೋಟಿ ಹಾಗೂ ಕೆರೆಗಳ ಹೂಳೆತ್ತುವ ಕಾರ್ಯಕ್ಕೆ 35 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ರಾಜ್ಯಾದ್ಯಂತ 496 ಗ್ರಾಮಗಳಿಗೆ 1022 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

ಬರಪೀಡಿತ ಪ್ರದೇಶಗಳಲ್ಲಿ ಪ್ರಸ್ತುತ 42 ಗೋಶಾಲೆಗಳು ಹಾಗೂ 85 ಮೇವಿನ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಮೇವಿನ ಬ್ಯಾಂಕಿನಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಮೇವನ್ನು ವಿತರಿಸಲಾಗುತ್ತಿದೆ.

ಆರ್‌ಕೆವಿವೈ ಹಾಗೂ ವಿಪತ್ತು ನಿರ್ವಹಣೆ ಯೋಜನೆಯಡಿ ರೈತರಿಗೆ ಉಚಿತವಾಗಿ ಮೇವಿನ ಮಿನಿ ಕಿಟ್ ವಿತರಿಸಲಾಗಿದ್ದು ಜನವರಿ ಫೆಬ್ರವರಿಯಲ್ಲಿ ಇಳುವರಿ ಲಭ್ಯವಾಗಲಿದೆ.

ಸಮಸ್ಯಾತ್ಮಕ ಪ್ರದೇಶಗಳಲ್ಲಿ 24*7 ನಿಯಂತ್ರಣ ಕೊಠಡಿಗಳನ್ನು ತೆರೆದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಗೆಹರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಕುಡಿಯುವ ನೀರು ಸರಬರಾಜಿಗಾಗಿ ಜಿಲ್ಲೆಗಳಿಗೆ ಕಂದಾಯ ಇಲಾಖೆಯಿಂದ 366.9 ಕೋಟಿ ರೂ. ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 201 ಕೋಟಿ ರೂ. ಹಾಗೂ ನಗರಾಭಿವೃದ್ಧಿ ಇಲಾಖೆಯಿಂದ 195.1 ಕೋಟಿ ರೂ., ಒಟ್ಟು 763 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಗ್ರಾಮೀಣ ಕುಡಿಯುವ ನೀರು ಸರಬರಾಜು:

ಟಾಸ್ಕ್‌ಫೋರ್ಸ್ ಘಟಕದಡಿ ಕುಡಿಯುವ ನೀರಿಗಾಗಿ 201.78 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಅನುಮೋದನೆಯಾದ 14208 ಕಾಮಗಾರಿಗಳಲ್ಲಿ 8770 ಕಾಮಗಾರಿಗಳನ್ನು ಪೂರ್ಣಗೊಳಿಸಿ 89.14 ಕೋಟಿ ರೂ. ವೆಚ್ಚ ಮಾಡಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಸಲು ಅಗತ್ಯ ತುರ್ತು ಕಾಮಗಾರಿಗಳಿಗೆ ಎಸ್‌ಎಫ್‌ಸಿ ಅನುದಾನದಿಂದ 102.45 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅಲ್ಲದೆ 2016 ಏಪ್ರಿಲ್ ಮಾಹೆಯ ಆರಂಭಿಕ ಶಿಲ್ಕು ಸೇರಿ ಒಟ್ಟಾರೆ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ 195.10 ಕೋಟಿ ರೂ. ಅನುದಾನ ಕಲ್ಪಿಸಲಾಗಿದೆ. ಈ ಪೈಕಿ ಡಿಸೆಂಬರ್ 2016ರ ಅಂತ್ಯಕ್ಕೆ 101.66 ಕೋಟಿ ರೂ. ವೆಚ್ಚ ಭರಿಸಲಾಗಿದ್ದು ಜಿಲ್ಲಾಧಿಕಾರಿಗಳ ಬಳಿ 89.18 ಕೋಟಿ ರೂ. ಅನುದಾನ ಲಭ್ಯವಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ಈ ಮೇಲಿನ ಅನುದಾನದ ಜೊತೆಗೆ ತಮ್ಮ ಸ್ವಂತ ಸಂಪನ್ಮೂಲದಿಂದ ಹಾಗೂ ಕಂದಾಯ ಇಲಾಖೆಯ ಬರಪರಿಹಾರ ನಿಧಿ ಅನುದಾನವನ್ನು ಬಳಸಿಕೊಂಡು ಕುಡಿಯುವ ನೀರಿನ ಸಮಸ್ಯೆ ಇರುವ ವಾರ್ಡ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಗದಗ ಹಾಗೂ ತುಮಕೂರು ನಗರ ಸಭೆಯ ಕೆಲವು ವಾರ್ಡ್‌ಗಳಲ್ಲಿ ಸ್ವಲ್ಪಮಟ್ಟಿನ ನೀರಿನ ಸಮಸ್ಯೆಗಳಿದ್ದು ಅಂತಹ ವಾರ್ಡ್‌ಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಸಚಿವರು ಸದನಕ್ಕೆ ಮಾಹಿತಿ ನೀಡಿದರು.

ಎಸ್‌ಎಂ/ಇಂದಿರಾ/ಕೆಎಂ

## ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಪಾಲಿಕೆ ಪಿಂಚಣಿದಾರರ ವಂತಿಗೆ:

### ಪ್ರಸಕ್ತ ಬಜೆಟ್‌ನಲ್ಲಿ ಅನುದಾನ ಮೀಸಲು-ಆರ್.ರೋಷನ್‌ಬೇಗ್

**ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)**

2014–15ನೇ ಸಾಲಿನವರೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಪಿಂಚಣಿದಾರರ ವಂತಿಗೆಯನ್ನು ಪಾಲಿಕೆಯ ಸ್ವಂತ ಸಂಪನ್ಮೂಲದಿಂದ ಭರಿಸಲಾಗುತ್ತಿದ್ದು, ಸದರಿ ಹಣವನ್ನು ಎಸ್‌ಎಫ್‌ಸಿ ಅನುದಾನದಿಂದ ಭರಿಸಲು ಕೋರಿಕೆ ಸ್ವೀಕೃತವಾಗಿರುವ ಹಿನ್ನಲೆಯಲ್ಲಿ ಈ ಕುರಿತಂತೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ ಎಂದು ನಗರಾಭಿವೃದ್ದಿ ಮತ್ತು ಹಜ್ ಸಚಿವರಾದ ಆರ್.ರೋಷನ್‌ಬೇಗ್ ಅವರು ವಿಧಾನಸಭೆಗೆ ತಿಳಿಸಿದರು.

ವಿಧಾನಸಭಾ ಸದಸ್ಯ ಅರವಿಂದ ಚಂದ್ರಕಾಂತ ಬೆಲ್ಲದ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ ಮೂರು ವರ್ಷದಿಂದ ಎಸ್‌ಎಫ್‌ಸಿ ನಿಧಿಯಿಂದ ಪಿಂಚಣಿ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಮೂರು ವರ್ಷದ ಬಾಕಿ 110 ಕೋಟಿ ರೂಗಳನ್ನು ಪಾವತಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಶೀಘ್ರವೇ ಬಾಕಿ ಪಾವತಿಸಲಾಗುವುದು ಎಂದರು.

ಪ್ರಸ್ತುತ ಆಯವ್ಯಯದಲ್ಲಿ ಬೆಳಗಾವಿ ಪಾಲಿಕೆ 16.64 ಕೋಟಿ, ಹುಬ್ಬಳ್ಳಿ-ಧಾರವಾಡ ಪಾಲಿಕೆಗಳಿಗೆ 36.4 ಕೋಟಿಗಳನ್ನು ಮೀಸಲಿರಿಸಲಾಗುವುದು ಎಂದ ಸಚಿವರು, ಈ ಕುರಿತಂತೆ ಚರ್ಚಿಸಲು ಇಂದೇ ಅಧಿಕಾರಿಗಳ ಸಭೆ ಕರೆಯುವುದಾಗಿ ತಿಳಿಸಿದರು.

ಎಸ್‌ಎಂ/ಮಮತ

## ಅತ್ಯಾಚಾರಿಗಳ ವಿರುದ್ದ ಗೂಂಡಾ ಕಾಯ್ದೆ ಜರುಗಿಸಲು ಕ್ರಮ–ಡಾ.ಜಿ.ಪರಮೇಶ್ವರ್

**ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)**

ಅತ್ಯಾಚಾರ ಪ್ರಕರಣಗಳಲ್ಲಿ ಅತ್ಯಾಚಾರಿಗಳ ವಿರುದ್ದ ಗೂಂಡಾ ಕಾಯ್ದೆಯಡಿ ಕ್ರಮ ಜರುಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಅವರು ವಿಧಾನಸಭೆಗೆ ಇಂದು ತಿಳಿಸಿದರು.

ಸದಸ್ಯರಾದ ಶಶಿಕಲಾ ಜೊಲ್ಲೆ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಿದ ಸಚಿವರು, ತುಮಕೂರು ಜಿಲ್ಲೆಯಲ್ಲಿ ಬುದ್ದಿಮಾಂದ್ಯ ಮಹಿಳೆ ಮೇಲೆ ಇತ್ತೀಚೆಗೆ ನಡೆದ ಅತ್ಯಾಚಾರ ಪ್ರಕರಣ ಸಮಾಜಕ್ಕೆ ಶೋಭೆ ತರುವಂತಹುದ್ದಲ್ಲ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಆರೋಪಿ ಎಎಸ್‌ಐ ಉಮೇಶ್‌ನನ್ನು ಈಗಾಗಲೇ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು, ಈತನ ವಿರುದ್ದ ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳಲಾಗುವುದು ಎಂದ ಗೃಹ ಸಚಿವರು, ಇಂತಹ ಪ್ರಕರಣಗಳಲ್ಲಿ ಅತ್ಯಾಚಾರಿಗಳ ವಿರುದ್ದ ಗೂಂಡಾ ಕಾಯ್ದೆಯಡಿ ಜರುಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಸಿ.ಸಿ. ಕ್ಯಾಮರಾ ಅಳವಡಿಕೆ:

ಇಂಡಿ ಶಾಸಕ ಯಶವಂತರಾಯಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿಜಯಪುರ ಇಂಡಿ ಪಟ್ಟಣದಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಪ್ರಮುಖ ವೃತ್ತಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲು ಅಲ್ಲಿನ ಮುನಿಸಿಪಾಲಿಟಿಗೆ ಸೂಚಿಸಲಾಗುವುದು, ಸ್ಥಳೀಯ ಆಡಳಿತ ಕ್ರಮ ಕೈಗೊಳ್ಳದಿದ್ದಲ್ಲಿ ಪೊಲೀಸ್ ಇಲಾಖೆ ವತಿಯಿಂದ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗೆ ಪೊಲೀಸ್ ಇಲಾಖೆ ವತಿಯಿಂದ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಮಹಿಳಾ ಸಹಾಯವಾಣಿ, ಅಭಯ ಗಸ್ತು ವಾಹನ, ಮಹಿಳಾ ಠಾಣೆಗಳ ಸ್ಥಾಪನೆ ಮಾಡಲಾಗಿದ್ದು, ಒಟ್ಟು 20 ಸಾವಿರ ಪೊಲೀಸ್ ಪೇದೆಗಳ ನೇಮಕಾತಿ ಮಾಡಲಾಗಿದ್ದು, 1000 ಸಬ್ ಇನ್ಸ್‌ಪೆಕ್ಟರ್‌ಗಳ ನೇಮಕ ಆಗಿದೆ. ಈ ಪೈಕಿ 160 ಮಂದಿ ಎಸ್‌ಐಗಳು 2000 ಪೇದೆಗಳು ಬೆಂಗಳೂರಿಗೆ ನಿಯೋಜಿಸಲಾಗಿದೆ ಎಂದು ಕುಡಚಿ ಶಾಸಕ ರಾಜೀವ್ ಅವರ ಪ್ರಶ್ನೆಗೆ ಉತ್ತರಿಸಿದರು.

ಎಸ್‌ಎಂ/ಮಮತ

## ವಸತಿ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ನಿಯಂತ್ರಿಸಲು ಬಿಗಿ ಕ್ರಮ: ಸಚಿವ ಜಾರ್ಜ್

**ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)**

ವಸತಿ ಪ್ರದೇಶಗಳಲ್ಲಿ ಅಕ್ರಮ ವಾಣಿಜ್ಯ ಚಟುವಟಿಕೆಗಳನ್ನು ಕೈಗೊಳ್ಳುವುದನ್ನು ತಡೆಯಲು ಬಿಬಿಎಂಪಿ ವತಿಯಿಂದ ಸಾರ್ವಜನಿಕ ತಿಳುವಳಿಕೆ ಪ್ರಕಟಣೆ ನೀಡಲಾಗಿದ್ದು, ವಸತಿ ವಲಯಗಳಲ್ಲಿ ಅನುಮತಿಸಬಹುದಾದ ಉಪಯೋಗಗಳಿಗೆ ವಿರುದ್ಧವಾಗಿ ಚಟುವಟಿಕೆ ನಡೆಸುತ್ತಿರುವ ವಾಣಿಜ್ಯೋದ್ಯಮಿಗಳ ಪಟ್ಟಿ ಮಾಡಿ ಅಂತಹ ಚಟುವಟಿಕೆ ಮುಚ್ಚಿಸಲು ಕ್ರಮ ಕೈಗೊಳ್ಳುವಂತೆ ಪಾಲಿಕೆಯ ಆರೋಗ್ಯ ನಿರೀಕ್ಷಕರುಗಳಿಗೆ ಸೂಚಿಸಲಾಗಿದೆ ಎಂದು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಸಚಿವ ಕೆ.ಜೆ ಜಾರ್ಜ್ ಅವರು ವಿಧಾನಸಭೆಗೆ ತಿಳಿಸಿದರು.

ಶಾಸಕ ಎನ್.ಎ ಹ್ಯಾರಿಸ್ ಇವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭವಿಷ್ಯದಲ್ಲಿ ವಸತಿ ಪ್ರದೇಶದಲ್ಲಿ ಅನಧಿಕೃತವಾಗಿ ವಸತಿಯೇತರ ಚಟುವಟಿಕೆಗಳಿಗೆ ಟ್ರೇಡ್ ಲೈಸೆನ್ಸ್ ನೀಡುವಾಗ ಅಂತಹ ಕಟ್ಟಡಗಳಿಗೆ ನೀಡಲಾದ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರದಲ್ಲಿ ನೀಡಲಾದ ಉಪಯೋಗಗಳಿಗೆ ಮಾತ್ರ ಅನುಮತಿಸಲು ಮತ್ತು ಅನಧಿಕೃತವಾಗಿ ವಸತಿಯೇತರ ಚಟುವಟಿಕೆ ಕೈಗೊಳ್ಳದಂತೆ ಪಾಲಿಕೆಯ ಆರೋಗ್ಯ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದರು.

ಇದಲ್ಲದೆ ವಾಣಿಜ್ಯ ತೆರಿಗೆ, ಅಬಕಾರಿ, ತೂಕ ಮತ್ತು ಅಳತೆ ಮಾಪನ ಇಲಾಖೆ, ಜಲಮಂಡಳಿ, ಬೆಸ್ಕಾಂ ಇಲಾಖೆಗಳು ಇಂತಹ ವಸತಿಯೇತರ ಚಟುವಟಿಕೆಗಳಿಗೆ ಅನುಮತಿ ನೀಡುವಾಗ ಕಡ್ಡಾಯವಾಗಿ ಪಾಲಿಕೆಯಿಂದ ಮಂಜೂರಾದ ನಕ್ಷೆ ಮತ್ತು ಸ್ವಾಧಿನಾನುಭವ ಪ್ರಮಾಣಪತ್ರ ಪಡೆದು ಅನುಮತಿಸಿದ ಉದ್ದೇಶಗಳಿಗೆ ಅನುಮತಿ ನೀಡಲು ನಿರ್ದೇಶನ ನೀಡಲಾಗುವುದು ಎಂದರು.

ಎಸ್‌ಎಂ/ಮಮತ

## ಕ್ಲಬ್‌ಗಳ ಕಾರ್ಯವೈಖರಿ: ಇಂದು ಸದನ ಸಮಿತಿ ವರದಿ ಮಂಡನೆ

**ಬೆಂಗಳೂರು, ಫೆಬ್ರವರಿ 7, (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ವಿಚಾರಣೆ ನಡೆಸಿ ನೀಡಿರುವ ಸದನ ಸಮಿತಿಯ ವರದಿಯನ್ನು ಸದನ ಸಮಿತಿ ಅಧ್ಯಕ್ಷ ಎನ್.ಎ ಹ್ಯಾರಿಸ್‌ರವರು ಇಂದು ವಿಧಾನಸಭೆಗೆ ಮಂಡಿಸಿದರು.

## ಸಮಿತಿ ಶಿಫಾರಸ್ಸುಗಳು:

1. ರಾಜ್ಯದ ಯಾವುದೇ ಕ್ಲಬ್‌ಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳನ್ನು ನಿಷೇಧಿಸದೆ ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂಬುದನ್ನು ವಿಧೇಯಕದಲ್ಲಿ ಅಳವಡಿಸಿಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.
2. ಸದಸ್ಯತ್ವ ಶುಲ್ಕ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಲಾಭದ ಉದ್ದೇಶವಿರದ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಕ್ಲಬ್‌ನ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.
3. ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಆಯಾಯ ಕ್ಷೇತ್ರವಾರು ಜನಪ್ರತಿನಿಧಿಗಳು (ಎಂಪಿ, ಎಂ.ಎಲ್.ಎ., ಎಂ.ಎಲ್.ಸಿ.) ಸದಸ್ಯರಾಗ ಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು (Membership) ಅವರುಗಳು ಬಯಸುವ ಎರಡು ಕ್ಲಬ್‌ಗಳಲ್ಲಿ ಮಾತ್ರ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಿಗೆ ಹಾಗೂ ಶೌರ್ಯ ಪ್ರಶಸ್ತಿಯನ್ನು ಪಡೆದ ಮಾಜಿ ಸೈನಿಕರಿಗೆ ಆಯಾ ಪ್ರದೇಶಗಳಲ್ಲಿರುವ ಅವರು ಬಯಸಿದ ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಯಾವುದಾದರೂ ಒಂದು ಕ್ಲಬ್‌ನ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.
5. ವಿಧಾನ ಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಾಂವಿಧಾನಿಕ ಕ್ಲಬ್ (Constitutional Club) ಜರೂರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಸ್ಥಳಾವಕಾಶವು ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತುರ್ತಾಗಿ ಒದಗಿಸಿ ಪ್ರಸ್ತುತ ವರ್ಷದಿಂದಲೇ ಅದು

ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ಕರ್ನಾಟಕ ಸಾಂವಿಧಾನಿಕ ಕ್ಲಬ್ (Constitution Club of Karnataka) ಅನ್ನು ಸ್ಥಾಪಿಸಿದ ನಂತರ ಭಾರತ ಸಾಂವಿಧಾನಿಕ ಕ್ಲಬ್ (Constitution Club of India) ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಹಾಗೂ ಕ್ಲಬ್‌ನ್ನು ಭಾರತ ಸಾಂವಿಧಾನಿಕ ಕ್ಲಬ್‌ನ ಸಂಯೋಜನೆ ಪಡೆದು ಅದರ ಸಹಯೋಗದಲ್ಲಿ ಒಂದು ಜಂಟಿ ಉದ್ಯಮವಾಗಿ ನಡೆಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

7. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕೆಂದು ಹಾಗೂ ಇನ್ನೂ ಮುಂದೆ ಕ್ಲಬ್‌ಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದರೆ ಮಾತ್ರ ಪರವಾನಿಗೆ ನೀಡಲು ಅಥವಾ ನವೀಕರಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಹೊಸ ಬಡಾವಣೆ ನಿರ್ಮಾಣ ಮಾಡಲು ಅನುಮತಿ ನೀಡುವ ಸಂದರ್ಭದಲ್ಲಿಯೇ ಆ ಬಡಾವಣೆಯಲ್ಲಿ ಕ್ಲಬ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ಥಳ ನಿಗದಿಪಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. 25 ಎಕರೆಗಿಂತ ಮೇಲ್ಪಟ್ಟ ಜಮೀನಿನಲ್ಲಿ ಮುಂದೆ ರಚಿಸಲಾಗುವ ಬಡಾವಣೆಗಳಲ್ಲಿ, ಆ ಬಡಾವಣೆಯ ನಿವಾಸಿಗಳಿಗೆ ಅನುಕೂಲವಾಗುವಂತೆ ಕ್ಲಬ್‌ನ್ನು ಸ್ಥಾಪಿಸಲು ಸ್ಥಳಾವಕಾಶವನ್ನು ಮೀಸಲಿಡುವಂತೆ Karnataka Town and Country Planning Act ನ್ನು ತಿದ್ದುಪಡಿ ಮಾಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

10. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ನಿರ್ಮಿಸಲು ಸರ್ಕಾರದ ವತಿಯಿಂದ ಜಾಗ ನೀಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

11. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ

ನಿಯಂತ್ರಿಸಲು ವಿಧೇಯಕವೊಂದನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಿ, ಸೂಕ್ತ ಕಾನೂನು ಜಾರಿಗೆ ತರಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಎಸ್‌ಎಂ/ಮಮತ

## ರಾಜ್ಯದಲ್ಲಿನ 141 ಉಗ್ರಾಣ ಶಾಖೆ ಹಾಗೂ 7 ಪ್ರಾದೇಶಿಕ ಕಚೇರಿಯ ಸೇವಾ ಸೌಲಭ್ಯಕ್ಕೆ ಸಂಪರ್ಕಿಸಿ

ಬೆಂಗಳೂರು, ಫೆಬ್ರವರಿ 7 , (ಕರ್ನಾಟಕ ವಾರ್ತೆ)

ರಾಜ್ಯ ಉಗ್ರಾಣ ನಿಗಮದಿಂದ ರೈತರು, ವ್ಯಾಪಾರಸ್ಥರು, ಅಕ್ಕಿ ಗಿರಣಿ ಮಾಲೀಕರು ಮತ್ತು ದಾಸ್ತಾನು ಸ್ಥಳದ ಅಗತ್ಯತೆ ಇರುವವರಿಗೆ ಉತ್ತಮವಾದ ಮತ್ತು ವೈಜ್ಞಾನಿಕ ದಾಸ್ತಾನು ಸೇವಾ ಸೌಲಭ್ಯ ನೀಡಲಾಗುತ್ತಿದೆ.

ಸಹಕಾರ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು 141 ರಾಜ್ಯ ಉಗ್ರಾಣ ಶಾಖೆಗಳನ್ನು ಹೊಂದಿದೆ.

ಸಾಲ ಸೌಲಭ್ಯ:

ಸುಗ್ಗಿಯ ಕಾಲದಲ್ಲಿ ಮಾರುಕಟ್ಟೆ ಬೆಲೆ ಕಡಿಮೆಯಾಗುವುದರಿಂದ ರೈತರು ಭ್ರಮನಿರಸನರಾಗಿ ತಮ್ಮ ಕೃಷಿ ಉತ್ಪನ್ನಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡುವುದನ್ನು ತಡೆಯಲು ರಾಜ್ಯ ಉಗ್ರಾಣದಲ್ಲಿ ದಾಸ್ತಾನು ಮಾಡಲಾದ ಸರಕಿನ ಆಧಾರದ ಮೇಲೆ ಬ್ಯಾಂಕುಗಳು ಮತ್ತು ಇತರೆ ಹಣಕಾಸಿನ ಸಂಸ್ಥೆಗಳು ಸಾಲ-ಸೌಲಭ್ಯಗಳನ್ನು ನೀಡುತ್ತವೆ.

ನಿಗಮದ ಉಗ್ರಾಣ ಮಳಿಗೆಗಳನ್ನು **WDRA** ಅಡಿಯಲ್ಲಿ ನೋಂದಣಿ ಮಾಡಿಸಲಾಗಿರುವುದರಿಂದ ಈ ಮಳಿಗೆಗಳಲ್ಲಿ ಸಂಗ್ರಹಿಸುವ ಕೃಷಿ ಉತ್ಪನ್ನಗಳಿಗೆ ಚಲಾವಣೆಗೆ ಉಗ್ರಾಣ ರಶೀದಿಗಳನ್ನು ನೀಡುವುದರಿಂದ, ಈ ರಶೀದಿಗಳ ಆಧಾರದ ಮೇಲೆ ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿ ದರದಲ್ಲಿ ಹೆಚ್ಚಿನ ಸಾಲವನ್ನು ಪಡೆದು ರೈತರು ಸಂಕಷ್ಟ ಮಾರಾಟದಿಂದ ಮುಕ್ತಿ ಹೊಂದಬಹುದಾಗಿದೆ.

ಸುಗ್ಗಿಯ ಕಾಲದ ನಂತರ ಹೆಚ್ಚಾಗಬಹುದಾದ ದರದಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ದರವನ್ನು ಪಡೆಯಬಹುದಾಗಿರುತ್ತದೆ.

ಇ-ಮಾರುಕಟ್ಟೆ ವ್ಯವಸ್ಥೆ

ನಿಗಮದ ಉಗ್ರಾಣ ಕೇಂದ್ರಗಳಲ್ಲಿ ಸಂಗ್ರಹಿಸುವ ಕೃಷಿ ಉತ್ಪನ್ನಗಳಿಗೆ ಉಗ್ರಾಣ ಆಧಾರಿತ ಇ-ಮಾರುಕಟ್ಟೆ **(Warehouse Based Sales)** ವ್ಯವಸ್ಥೆಯನ್ನು ಒದಗಿಸಿ ರೈತರ ಕೃಷಿ

ಉತ್ಪನ್ನಗಳನ್ನು ಪಾರದರ್ಶನ ಹಾಗೂ ಸ್ಪರ್ಧಾತ್ಮಕ ಮಾರಾಟ ವ್ಯವಸ್ಥೆ ಮೂಲಕ ಹೆಚ್ಚಿನ ದರಕ್ಕೆ ಮಾರಾಟ ಮಾಡಿ ಹೆಚ್ಚಿನ ಲಾಭ ಪಡೆಯಲು ಅನುಕೂಲ ಮಾಡಿಕೊಡಲಾಗಿದೆ.

ವಿಮಾ ರಕ್ಷಣೆ:

ರೈತರ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ರಾಜ್ಯ ಉಗ್ರಾಣಗಳಲ್ಲಿ ಸ್ಥಳ ಮೀಸಲಿರಿಸಲಾಗಿರುತ್ತದೆ. ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನು ಮಾಡಲಾಗುವ ಸರಕುಗಳಿಗೆ ಬೆಂಕಿ ಕಳುವು ಮತ್ತು ಡಕಾಯಿತಿ ಮೊದಲಾದ ಅಪಾಯಗಳಿಗೆ ವಿಮೆ ಮುಖಾಂತರ ರಕ್ಷಣೆ ಇರುತ್ತದೆ.

ರಿಯಾಯಿತಿ:

ವಾಸ್ತಾವಿಕ ಕೃಷಿಕರಿಂದ ಶೇಖರಣೆ ಮಾಡಿದ ದಾಸ್ತಾನಿಗೆ ಸಂಗ್ರಹಣಾ ಶುಲ್ಕದಲ್ಲಿ ರೈತರಿಗೆ ಶೇ 15 ರಷ್ಟು, ಮಹಿಳಾ ರೈತರಿಗೆ ಶೇ 20 ರಷ್ಟು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ. 25 ರಷ್ಟು ರಿಯಾಯಿತಿ ನೀಡಲಾಗುವುದು.

ವೈಜ್ಞಾನಿಕ ಸಂರಕ್ಷಣೆ:

ರೈತರು, ವ್ಯಾಪಾರಸ್ಥರು, ಗಿರಣಿ, ಮಾಲೀಕರು, ಭಾರತ ಆಹಾರ ನಿಗಮ, ರಸಗೊಬ್ಬರ ಕಂಪೆನಿಗಳು ಮತ್ತು ವಿತರಕರು, ಮೊದಲಾದವರುಗಳ ಆಹಾರ ಧಾನ್ಯಗಳು, ಬೇಳೆಕಾಳುಗಳು, ಎಣ್ಣೆಬೀಜಗಳು, ರಸಗೊಬ್ಬರ ಮೊದಲಾದವುಗಳನ್ನು ವೈಜ್ಞಾನಿಕ ವಿಧಾನಗಳ ಮುಖಾಂತರ ನಿಗಮದ ಗೋದಾಮುಗಳಲ್ಲಿ ದಾಸ್ತಾನು ಮಾಡಲಾಗುವುದು. ದಾಸ್ತಾನು ಮಾಡಲಾದ ಸರಕುಗಳನ್ನು ವೈಜ್ಞಾನಿಕ ವಿಧಾನಗಳಿಂದ ಸಂರಕ್ಷಿಸಲಾಗುವುದು.

ರಾಜ್ಯಾದ್ಯಂತ ಅಗತ್ಯವಿರುವ ಗೋದಾಮುಗಳನ್ನು, ದಾಸ್ತಾನು ಸ್ಥಳವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ವಹಿಸಿಕೊಡಲಾಗುವುದು.

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಅನ್ನಭಾಗ್ಯ, ಸರ್ಕಾರದ ಬೆಂಬಲ ಬೆಲೆ ಯೋಜನೆ, ಸಾರ್ವಜನಿಕ ಪಡಿತರ ಯೋಜನೆ ಮೊದಲಾದ ವ್ಯವಸ್ಥೆಗಳಿಗೆ ವೈಜ್ಞಾನಿಕ ಸಂಗ್ರಹಣಾ ಸ್ಥಳಾವಕಾಶವನ್ನು ಒದಗಿಸಲಾಗುತ್ತಿದೆ.

ರಾಜ್ಯ ಉಗ್ರಾಣದ ದಾಸ್ತಾನು ಸೇವಾಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಹೆಚ್ಚಿನ ಮಾಹಿತಿಗಾಗಿ ಸಮೀಪದ ರಾಜ್ಯ ಉಗ್ರಾಣ ಕಚೇರಿ, ಪ್ರಾದೇಶಿಕ ವ್ಯವಸ್ಥಾಪಕರ ಕಚೇರಿ, ಕೇಂದ್ರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಛಾಯಾಚಿತ್ರ ಶೀರ್ಷಿಕೆ:

ಭಾರತ ಸೇವಾದಳ ಶಾಲೆಯಲ್ಲಿ ದಡಾರ ರುಬೆಲ್ಲಾ ಚುಚ್ಚುಮದ್ದಿನ ಕಾರ್ಯಕ್ರಮವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಚಿವ ತನ್ವೀರ್ ಸೇಠ್ ಅವರು ಉದ್ಘಾಟಿಸಿದರು.